ಕರ್ನಾಟಕ ಸರ್ಕಾರ

(ಕಂದಾಯ ಇಲಾಖೆ)

# ಜಿಲ್ಲಾಧಿಕಾರಿಗಳ ಕಾರ್ಯಾಲಯ, ಮಂಡ್ಯ ಜಿಲ್ಲೆ, ಮಂಡ್ಯ

ಸಂ. ಎಲ್.ಎ.ಕೂ(2)ಸಿಆರ್:64/11-12

ದಿನಾಂಕ: 04/09/2018

## ಪ್ರಕಟಣೆ

ವಿಷಯ: ಕಂದಾಯ ಇಲಾಖೆಯಲ್ಲಿ ಭೂಸ್ವಾಧೀನ ಹಾಗೂ ಇತರೆ ಪ್ರಕರಣಗಳಿಗೆ ಸಂಬಂಧಿಸಿದ ವ್ಯಾಜ್ಯಗಳಲ್ಲಿ ಜಿಲ್ಲಾಧಿಕಾರಿಗಳಿಗೆ ಕಾನೂನಿನ ಸಲಹೆ ನೀಡಲು ಕಾನೂನು ಸಲಹೆಗಾರರನ್ನು ನೇಮಕ ಮಾಡುವ ಬಗ್ಗೆ.

ಉಲ್ಲೇಖ: 1)ಸರ್ಕಾರದ ಆದೇಶ ಸಂಖ್ಯೆ:ಕಂಇ 34 ಭೂಸ್ವಾಬೆ 2010, ದಿನಾಂಕ:27/09/2010.
2)ಸರ್ಕಾರದ ತಿದ್ದುಪಡಿ ಆದೇಶ ಸಂ:ಕಂಇ 34 ಭೂಸ್ವಾಬೆ 2010 ದಿನಾಂಕ:11/10/2012.

*****

ಕಂದಾಯ ಇಲಾಖೆಯಲ್ಲಿ ಜಿಲ್ಲಾಧಿಕಾರಿಗಳಿಗೆ ಭೂಸ್ವಾಧೀನ ಹಾಗೂ ಇತರೆ ಪ್ರಕರಣಗಳಲ್ಲಿ ಕಾನೂನಿನ ಸಲಹೆ ನೀಡಲು ಕಾನೂನು ಸಲಹೆಗಾರರ ಹುದ್ದೆಗಳನ್ನು ಸೃಜಿಸಲಾಗಿದೆ. ಈ ಹುದ್ದೆಗೆ ಕಾನೂನು ಪದವೀಧರರಾಗಿರುವ(ಎಲ್.ಎಲ್.ಬಿ.) ಕಂದಾಯ ಇಲಾಖೆಯ ನಿವೃತ್ತ ವಿಶೇಷ ಜಿಲ್ಲಾಧಿಕಾರಿ/ನಿವೃತ್ತ ತಹಶೀಲ್ದಾರ್/ನಿವೃತ್ತ ಉಪ ತಹಶೀಲ್ದಾರ್/ನಿವೃತ್ತ ಸಿವಿಲ್ ನ್ಯಾಯಾಧೀಶರನ್ನು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳುವ ಬಗ್ಗೆ ಹಾಗೂ ಕಾನೂನು ಸಲಹೆಗಾರರಿಗೆ ಕರ್ನಾಟಕ ನಾಗರೀಕ ಸೇವಾ ನಿಯಮಗಳು 1958ರ ನಿಯಮ 313(ಬಿ) ಪ್ರಕಾರ ಮಾಸಿಕ ಸಂಚಿತ ವೇತನವನ್ನು ನಿಗದಿಗೊಳಿಸುವುದು ಎಂದು ಉಲ್ಲೇಖದ ಸರ್ಕಾರದ ನಡಾವಳಿಗಳಲ್ಲಿ ನಿರ್ದೇಶನ ನೀಡಿರುತ್ತಾರೆ.

ಸರ್ಕಾರದ ಉಲ್ಲೇಖದ ಆದೇಶದನ್ವಯ, ಜಿಲ್ಲಾಧಿಕಾರಿಗಳ ಕಛೇರಿ, ಮಂಡ್ಯ ಜಿಲ್ಲೆ, ಮಂಡ್ಯ ಇಲ್ಲಿ ಖಾಲಿ ಇರುವ ಕೆಳಕಂಡ ಹುದ್ದೆಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ.

| ಕ್ರಮ ಸಂಖ್ಯೆ | ಹುದ್ದೆ | ಹುದ್ದೆ ಸಂಖ್ಯೆ |
|---|---|---|
| 1 | ಕಾನೂನು ಸಲಹೆಗಾರರು | 01 |

ಮೇಲೆ ವಿವರಿಸಲಾದ ಹುದ್ದೆಗೆ ಆಸಕ್ತಿ ಇರುವ ಕಾನೂನು ಪದವೀಧರರಾಗಿರುವ(ಎಲ್.ಎಲ್.ಬಿ.) ಕಂದಾಯ ಇಲಾಖೆಯ ನಿವೃತ್ತ ವಿಶೇಷ ಜಿಲ್ಲಾಧಿಕಾರಿ/ನಿವೃತ್ತ ತಹಶೀಲ್ದಾರ್/ನಿವೃತ್ತ ಉಪ ತಹಶೀಲ್ದಾರ್/ನಿವೃತ್ತ ಸಿವಿಲ್ ನ್ಯಾಯಾಧೀಶರು ಈ ಕೆಳಕಂಡ ದಾಖಲಾತಿಗಳೊಂದಿಗೆ ಅರ್ಜಿ ಸಲ್ಲಿಸಬಹುದಾಗಿದೆ.

1. ಅಧಿಕಾರಿ/ನೌಕರರು ಸರ್ಕಾರಿ ಕರ್ತವ್ಯದಿಂದ ನಿವೃತ್ತಿ ಹೊಂದಿದ ಆದೇಶದ ದೃಢೀಕೃತ ಪ್ರತಿ.
2. ವಿದ್ಯಾರ್ಹತೆಯ ಬಗ್ಗೆ ದೃಢೀಕೃತ ದಾಖಲೆ
3. ವೈದ್ಯಕೀಯ ದೃಢೀಕರಣ ಪತ್ರ.
4. ವಾಸ ಸ್ಥಳದ ವಿಳಾಸ

ಮೇಲ್ಕಂಡ ದಾಖಲಾತಿಗಳೊಂದಿಗೆ ಅರ್ಜಿಯನ್ನು ದಿನಾಂಕ: 20/09/18 ರೊಳಗೆ ಜಿಲ್ಲಾಧಿಕಾರಿಗಳು, ಮಂಡ್ಯ ಜಿಲ್ಲೆ, ಮಂಡ್ಯ ರವರಿಗೆ ಸಲ್ಲಿಸಬಹುದಾಗಿರುತ್ತದೆ.

Manjunatha 4/9/18

ಜಿಲ್ಲಾಧಿಕಾರಿ
ಮಂಡ್ಯ ಜಿಲ್ಲೆ, ಮಂಡ್ಯ.

ಪ್ರತಿಯನ್ನು:-

1. ಜಿಲ್ಲಾ ವಿಜ್ಞಾನ ಸೂಚನಾಧಿಕಾರಿ, ಎನ್.ಐ.ಸಿ., ಜಿಲ್ಲಾ ಪಂಚಾಯತ್, ಮಂಡ್ಯ ರವರಿಗೆ ಕಳುಹಿಸುತ್ತಾ, ಸದರಿ ಪ್ರಕಟಣೆಯನ್ನು ಮಂಡ್ಯ ಜಿಲ್ಲಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಅಗತ್ಯ ಕ್ರಮವಹಿಸಲು ಕೋರಿದೆ.
2. ಉಪವಿಭಾಗಾಧಿಕಾರಿ, ಮಂಡ್ಯ/ಪಾಂಡವಪುರ ರವರಿಗೆ ಕಳುಹಿಸುತ್ತಾ, ಕಛೇರಿ ನಾಮಫಲಕದಲ್ಲಿ ಪ್ರಕಟಿಸಲು ಕೋರಿದೆ.
3. ತಹಶೀಲ್ದಾರ್, ಮಂಡ್ಯ/ಮದ್ದೂರು/ಮಳವಳ್ಳಿ/ಪಾಂಡವಪುರ/ಶ್ರೀರಂಗಪಟ್ಟಣ/ಕೆ.ಆರ್.ಪೇಟೆ/ನಾಗಮಂಗಲ ರವರಿಗೆ ಕಳುಹಿಸುತ್ತಾ, ಕಛೇರಿ ನಾಮಫಲಕದಲ್ಲಿ ಪ್ರಕಟಿಸಲು ತಿಳಿಸಿದೆ.
4. ಈ ಕಛೇರಿಯ ನಾಮಫಲಕದಲ್ಲಿ ಪ್ರಕಟಿಸಲು
5. ಕಛೇರಿ ಪ್ರತಿ